ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ,
ಕೃವಿವಿ, ಜಿಕೆವಿಕೆ, ಬೆಂಗಳೂರು-65.

ಸಂಖ್ಯೆ ಹನಿಅ/ವಿಭಾಗ-2/ವೇತನ ಪರಿಷ್ಕರಣೆ/2018-19

ದಿನಾಂಕ : 18-7-2018

:::: ಸುತ್ತೋಲೆ ಸಂಖ್ಯೆ – 6 ::::

ವಿಷಯ : 6ನೇ ವೇತನ ಆಯೋಗದ ಶಿಫಾರಸ್ಸುಗಳಂತೆ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗೆ ವೇತನ ಮತ್ತು ಭತ್ಯೆಗಳನ್ನು ಯಥಾವತ್ತಾಗಿ ವಿಸ್ತರಿಸುವ ಬಗ್ಗೆ

ಉಲ್ಲೇಖ :
1. ಸರ್ಕಾರದ ಅದೇಶ ಸಂಖ್ಯೆ ಎಫ್‌ಡಿ 06 ಎಸ್‌ಅರ್‌ಪಿ 2018 ದಿನಾಂಕ 1-3-2018
2. ಸರ್ಕಾರದ ಅದೇಶ ಸಂಖ್ಯೆ ಎಫ್‌ಡಿ 06 ಎಸ್‌ಅರ್‌ಪಿ 2018 ದಿ: 19-4-2018
3. ಪತ್ರ ಸಂಖ್ಯೆ ಹನಿಅ/ವಿಭಾಗ-2/ಸಿಬ್ಬಂದಿ-ವೇತನ/2018-19 ದಿನಾಂಕ 25-4-2018
4. ದಿನಾಂಕ 2-6-2018 ರಂದು ನಡೆದ 138ನೇ ಆರ್ಥಿಕ ಸ್ಥಾಯಿ ಸಮಿತಿ ಸಭೆಯ ನಡವಳ
5. ದಿನಾಂಕ 12-6-2018 ರಂದು ನಡೆದ 378ನೇ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ ಸಭೆಯ ನಡವಳಿಯ ಐಟಂ ಸಂಖ್ಯೆ 17
6. ಸರ್ಕಾರದ ಪತ್ರ ಸಂಖ್ಯೆ ಕೃಇ 30 ಕೃವಿಬಿ 2018 ದಿನಾಂಕ 17-7-2018
7. ಕುಲಪತಿಗಳ ಅನುಮೋದನೆ ದಿನಾಂಕ 18-7-2018

ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರಿ ನೌಕರರು ಮತ್ತು ವಿಶ್ವವಿದ್ಯಾನಿಲಯಗಳ ಭೋಧಕೇತರ ಸಿಬ್ಬಂದಿಯ ವೇತನ ಶ್ರೇಣಿ ಮತ್ತು ಸಂಬಂಧಿಸಿದ ಭತ್ಯೆಗಳನ್ನು ಪರಿಷ್ಕರಿಸಲು ಉಲ್ಲೇಖಿತ ಅದೇಶ ಸಂಖ್ಯೆ (1) ಮತ್ತು (2) ರಂತೆ ಅನುಷ್ಠಾನಗೊಳಸುವ ಕುರಿತು ಅದೇಶ ಹೊರಡಿಸಿರುತ್ತದೆ. ಅದ್ದರಿಂದ, ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, ಬೋಧಕೇತರ ನೌಕರರ ವೇತನವನ್ನು ನಿಗದಿಪಡಿಸಲು ಉಲ್ಲೇಖಿತ ಸರ್ಕಾರಿ ಅದೇಶಗಳನ್ನು / ವೇತನ ನಿಗದಿಯ ಕೈಪಿಡಿಯನ್ನು ಪರಿಶೀಲಿಸುವುದು ಹಾಗೂ ಸದರಿ ನೌಕರರ ಸೇವಾ ಪುಸ್ತಕದಲ್ಲಿ ನಿಗದಿಪಡಿಸಿರುವ ಮೂಲವೇತನದಂತೆ ಪರಿಷ್ಕೃತ ವೇತನವನ್ನು ನಿಗದಿಪಡಿಸುವುದು. ಸರ್ಕಾರದ ಅದೇಶಗಳು, fitment table ಹಾಗೂ ಇತರೆ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ www.finance.kar.nic.in ವೀಕ್ಷಿಸುವುದು ಮತ್ತು ಅವಶ್ಯಕ ಅದೇಶಗಳ ಪ್ರತಿಗಳ ಪ್ರಿಂಟ್ ತೆಗೆದುಕೊಳ್ಳುವುದು.

ನಂತರ, ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಬೋಧಕೇತರ ನೌಕರರ ವೇತನವನ್ನು ನಿಗದಿಪಡಿಸಿ, ಸಂಬಂಧಪಟ್ಟ ನೌಕರರ ಸೇವಾ ಪುಸ್ತಕದಲ್ಲಿ ವಿವರಗಳನ್ನು ನಮೂದಿಸಿ ಬಟವಾಡೆ ಅಧಿಕಾರಿಗಳು / ನಿಯಂತ್ರಣಾಧಿಕಾರಿಗಳು ಸಹಿ ಮಾಡುವುದು ಹಾಗೂ ಸದರಿ ನಮೂನೆಯ ಒಂದು ಪ್ರತಿಯನ್ನು ದಿನಾಂಕ 25-7-2018 ರೊಳಗೆ ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು.

ಹಣಕಾಸು ನಿಯಂತ್ರಣಾಧಿಕಾರಿಗಳು.

ಪ್ರತಿ :

1. ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
2. ಎಲ್ಲಾ ಯೋಜನೆಗಳ ಮುಖ್ಯಸ್ಥರಿಗೆ
3. ಎಲ್ಲಾ ಕೇಂದ್ರಗಳ ಸಹ ಸಂಶೋಧನಾ ನಿರ್ದೇಶಕರಿಗೆ
4. ಎಲ್ಲಾ ಉಪ ಹಣಕಾಸು ನಿಯಂತ್ರಣಾಧಿಕಾರಿಗಳು, ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳಿಗೆ
5. ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ

## ಸರ್ಕಾರಿ ಆದೇಶ ಸಂಖ್ಯೆ ಆಇ 6 ಎಸ್‌ಆರ್‌ಪಿ 2018 ದಿನಾಂಕ 19-4-2018 – ಅನುಭಂಧ-2

### ನಮೂನೆ

| ಸರ್ಕಾರಿ ನೌಕರನ ಹೆಸರು ಮತ್ತು 1-7-2017 ರಂದು ಧಾರಣ ಮಾಡಿದ್ದ ಹುದ್ದೆ | 1-7-2017 ರಂದು ಧಾರಣ ಮಾಡಿರುವ ಹುದ್ದೆಯ ಈಗಿನ ವೇತನ ಶ್ರೇಣಿ | 1-7-2017 ರಂದು ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ವೇತನ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ಮೂಲ ವೇತನಕ್ಕೆ ಸಂವಾದಿಯಾಗಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿದ ವೇತನ | 8(1) ನೇ ನಿಯಮದ ಪರಂತುಕದ ಮೇರೆಗೆ ವೇತನ ಪುನರ್ ನಿಗದಿಯು ಪ್ರಯೋಜನಕಾರಿಯೇ? ಮತ್ತು ಹಾಗಿದ್ದರೆ, ಪುನರ್ ನಿಗದಿಪಡಿಸಿದ ವೇತನ ಮತ್ತು ಅಂತಹ ಪುನರ್ ನಿಗದಿಯ ದಿನಾಂಕ | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿ ದಿನಾಂಕ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ಟಿಪ್ಪಣಿ : ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು –

ಅ) ಅವನು ದಿನಾಂಕ 1ನೇ ಜುಲೈ 2017 ರಂದು ಧಾರಣ ಮಾಡಿದ್ದ ಹುದ್ದೆಯ ಸಂಬಂಧದಲ್ಲಿ, ಮತ್ತು

ಆ) ಅವನು ಉನ್ನತ ಹುದ್ದೆಯನ್ನು ಸ್ಥಾನಪನ್ನವಾಗಿ ಧಾರಣ ಮಾಡಿರದ ಪಕ್ಷದಲ್ಲಿ ಆ ದಿನಾಂಕದಂದು ಅವನು ಧಾರಣ ಮಾಡಿರಬಹುದಾದಂಥ ಕೆಳಗಿನ ಹುದ್ದೆ, ಯಾವುದಾದರೂ ಇದ್ದರೆ, ಅದಕ್ಕೆ ಸಂಬಂಧಿಸಿದಂತೆ – ಪ್ರತ್ಯೇಕವಾಗಿ ನಿಗದಿಪಡಿಸತಕ್ಕದ್ದು.

ಸರ್ಕಾರಿ ಆದೇಶದ 5ನೇ ಕಂಡಿಕೆಯಲ್ಲಿ
ನಮೂದಿಸಿದ ಪ್ರಾಧಿಕಾರದ ಸಹಿ.

ಪದನಾಮ :

ದಿನಾಂಕ :